This afternoon the Speaker and the members of the House Committee met at Tea to discuss the management of the Legislatures' Home and other residential places for legislatures. With a view to provide better atmosphere and convenience to legislators to enable them to discharge their functions, the Speaker and the House Committee unanimously agreed that the entire management with the exception of allotment of rooms which will be retained with the House Committee, may be handed over to the Government in the Public Works Department. The Government agreed to respect the desire of the Speaker and the House Committee and took over the managament. I need hardly mention that the enforcement of certain norms and discipline is a must if the legislators are to be provided with comforts which they need most In doing so, I take it that I will have the full co-operation of all the members of this House. I take this opportunity to request the members of this House as well as the Upper House to communicate to me, the Government, any suggestion if they have in mind, to improve the working of the Legislators Home and other residential buildings allotted to the legislators by 11 O'clock tomorrow.

SRI H. S. SIDDAPPA.— In addition to that I would like to know about the lounge canteens. Are you taking them also. The difficulty is that we did not have even a drop of water. I would request through the Chair that the P. W. D. Minister may take the responsibility of catering in both the lounges as you were kind enough to take the legislators Home because this also relates to members.

SRI H. M. CHANNABASAPPA.— Let us set right those things and next come to this.

MYSORE (BOMBAY AND HYDERABAD AREAS) RELIGIONS AND CHARITABLE IMAM ABOLITION BILL 1972, AS VERIFIED BY THE JSC MOTION TO CONSIDER (DEBATE COTINUED)

ಶ್ರೀ ಕೆ. ಪ್ರಭಾಕರ್ (ವರ್ತೂರು).— ಮಾನ್ಯ ಅಧ್ಯಕ್ಷರೇ, ಪ್ರಜಾಪ್ರಭುತ್ವದ ಕಾಲ ಬೆಳೆಯುತ್ತಿರುವಾಗ ನಮ್ಮ ದೇಶದಲ್ಲಿ ಸಾಂಪ್ರದಾಯಕವಾಗಿ, ರೂಢಮೂಲವಾಗಿ ಬೆಳೆದುಕೊಂಡು ಬಂದಂಥ ದೇವಸ್ಥಾನಗಳ ಹಕ್ಕುಬಾಧ್ಯತೆಗಳ ಜೀರ್ಣೋದ್ಧಾರ ಮತ್ತು ಅವುಗಳಿಂದ ಪ್ರಜಾಕೋಟಿಗೆ ಹಾಗೂ ಸಮಾಜದ ಬೆಳವಣಿಗೆಗೆ ಆಗತಕ್ಕ ರೀತಿನೀತಿಗಳನ್ನು ತಿದ್ದುಪಾಟು ಮಾಡುವ ಉದ್ದೇಶದಿಂದ ಸಂಸ್ಥಾನದಲ್ಲೆಲ್ಲ ಏಕರೂಪವಾದ ಶಾಸನ ಇರಬೇಕು ಎನ್ನುವ ಸದುದ್ದೇಶದಿಂದ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಸಂಬಂಧಪಟ್ಟ ಕಾನೂನುಗಳನ್ನು ಅಚ್ಚುಕಟ್ಟು ಮಾಡುವ ಉದ್ದೇಶದಿಂದಲೇ ಬಿಲ್ಲನ್ನು ತಂದಿದ್ದಾರೆ. ಇದು ಒಪ್ಪತಕ್ಕ ವಿಚಾರ. ಒಂದಲ್ಲ ಒಂದು ರೂಪದಲ್ಲಿ ಹಳೇ ಮೈಸೂರು ಭಾಗದಲ್ಲಿ ಇದ್ದಂಥ ನ್ಯೂನತೆಗಳನ್ನು ಸರಿಪಡಿಸಬೇಕು, ಹೈದರಾಬಾದ್ ಮತ್ತು ಉತ್ತರ ಕರ್ನಾಟಕದ ಭಾಗದಲ್ಲಿ ಇದ್ದಂಥ ತೊಡಕುಗಳನ್ನು ಕೂಡ ಸರಿಪಡಿಸಬೇಕು ಎನ್ನುವ ಘನವಾದ ಉದ್ದೇಶದಿಂದ ಕಾನೂನನ್ನು ಮಂಡಿಸಲಾಗಿತ್ತು. ಅವುಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ ಈ ಸಭೆಯ ಮುಂದೆ ಅಂತಿಮವಾಗಿ ಒಳ್ಳೆಯ ರೀತಿಯ ಕಾನೂನು ಮಾಡುವ ಉದ್ದೇಶದಿಂದ ಜಂಟೀ ಸಲಹಾ ಸಮಿತಿ ಪರಾಮರ್ಶೆ ಮಾಡಿರುವ ಮಸೂದೆ ನಮ್ಮ ಮುಂದೆ ಇವೆ. ಈ ಸಂದರ್ಭದಲ್ಲಿ ಹೆರಿಡಿಟರಿ ಪ್ರಿಸ್ಸ್‌ಹುಡ್ ಎನ್ನುವುದನ್ನು, ವಂಶಪಾರಂಪರ್ಯವಾಗಿ ಇದ್ದ ಪದ್ಧತಿಯನ್ನು ಮುಂದೆ ಹೇಗೆ ಮಾಡಬೇಕು ಎನ್ನುವ ಹೊಸ ಸೂಚನೆಯನ್ನು ಈ ಮಸೂದೆ

(ಶ್ರೀ ಕೆ. ಪ್ರಭಾಕರ್)

ಯಲ್ಲಿ ಸೇರಿಸಿಲ್ಲ. ದೇವಾಲಯಗಳು ಎಂದರೆ ಸಂಸ್ಕೃತಿಯ ಕೇಂದ್ರಗಳಾಗಬೇಕು ಮತ್ತು ಜನತೆಗೆ ಒಂದು ಸಂಪತ್ತಿನಂತೆ ಇರಬೇಕು. ದೇವಸ್ಥಾನಗಳು ಸಮಾಜಕ್ಕೆ ಬೇಕು ಆದರೆ ಅವು ಏನು ಕಾರ್ಯ ಕಟ್ಟಳೆಗಳನ್ನು ಮಾಡಬೇಕು ಎನ್ನುವುದನ್ನು ಮಾಡುತ್ತಿಲ್ಲ. ಸರ್ಕಾರದವರು ಇದನ್ನು ಮನಗಂಡು, ಅವು ಚೆನ್ನಾಗಿ ಕೆಲಸ ಮಾಡಬೇಕು ಎನ್ನುವ ಉದ್ದೇಶದಿಂದ ಈ ಕಾನೂನನ್ನು ತಂದಿದ್ದಾರೆ ಎನ್ನಬಹುದು. ಹೆರಿಡಿಟರಿ ಪ್ರಿಸ್ಟ್‌ಹುಡ್ ಬೇಡ ಎನ್ನುವುದಕ್ಕೆ ಕಾರಣವೇನು ಎಂದು ತೆಗೆದುಕೊಂಡರೆ, ಡೆಮಾಕ್ರಸಿ, ಸೋಷಿಲಿಸಂ ಮತ್ತು ಸೆಕ್ಯೂಲಾರೆಸಂ, ಈ ಮೂರನ್ನೂ ಪಾಲಿಸಿಕೊಂಡು ಆವುಗಳ ಆಧಾರದ ಮೇಲೆ ಸಮಾಜವನ್ನು ಹೊಸದಾಗಿ ನಿರೂಪಿಸಬೇಕಾದ ಕಾಲ ಬಂದಿರುವುದರಿಂದ, ಆನೂಚಾನವಾದ ಈ ಪದ್ಧತಿಯಿಂದ ಸಮಾಜದ ಬೆಳವಣಿಗೆಗೆ ಏನಾದರೂ ತೊಂದರೆಗಳು ಇದ್ದರೆ ಅವುಗಳನ್ನು ಆಳವಡಿಸಂವುದು ಕಷ್ಟ ಎನ್ನುವ ದೃಷ್ಟಿಯಿಂದ ಭಾರತ ದೇಶದ ಅನೇಕ ಕಡೆಗಳಲ್ಲಿ ಹೆರಿಡಿಟರಿ ಪ್ರಿಸ್ಟ್‌ಹುಡ್‌ನಿಂದ ಎಲ್ಲೆಲ್ಲಿ ಲೋಪವಿದೆಯೋ ಅದನ್ನು ತಪ್ಪಿಸುವುದಕ್ಕಾಗಿ ಪೂಜಾರಿಗಳು ಮತ್ತು ಅರ್ಚಕರು ಇವರಿಗ ಒಂದು ತರಬೇತನ್ನು ಕೊಟ್ಟು, ಶಾಸ್ತ್ರೋಕ್ತವಾದ ರೀತಿಯಲ್ಲಿ ಪೂಜೆ ಮಾಡುವುದಕ್ಕೆ ದೇವಸ್ಥಾನಗಳಲ್ಲಿ ಅವರನ್ನು ನೇಮಿಸುವುದನ್ನು ಕೇರಳದಲ್ಲಿ ಪ್ರಾರಂಭ ಮಾಡಿದ್ದಾರೆ. ಆದರೆ ಈ ಮಸೂದೆಯಲ್ಲಿ ಅದರ ಸೊಲ್ಲೇ ಇಲ್ಲ. ಎಷ್ಟು ಭೂಮಿ ಇದೆ, ಆ ಭೂಮಿಯನ್ನು ಕತ್ತುಕೊಂಡರೆ ಅವರ ಜೀವನ ಏನಾಗುತ್ತಿದೆ ಎನ್ನುವುದನ್ನು ಬಿಟ್ಟು ಬಾಕಿಯದನ್ನು ಈ ಮಸೂದೆಯಲ್ಲಿ ಆಳವಡಿಸಿಲ್ಲ. ಮುಂದೆ ಕಾನೂನು ಮಾಡುವಾಗ ಬಹಳ ಮುಂಜಾಗ್ರತೆಯಾಗಿ ಗಮನಿಸಿ ಸಾಕಷ್ಟು ಅವಕಾಶ ಮಾಡಿಕೊಡಬೇಕೆಂದು ಸಲಹೆಯನ್ನು ನಾನು ಮಾಡುತ್ತಿದ್ದೇನೆ.

ಧಾರ್ಮಿಕ ಚಟುವಟಿಕೆಗೆ ಸಂಬಂಧಪಟ್ಟಂತೆ ಸರ್ಕಾರದವರು ಸಂಪೂರ್ಣವಾಗಿ ಮಹಿಸಿಕೊಂಡು, ಅದರ ಆಗುಹೋಗುಗಳನ್ನು, ತೊಡಕುಗಳನ್ನು ನಿವಾರಣೆ ಮಾಡಬೇಕು ಎಂದು ಡೀಸೆಂಟ್ರಲೈಸೇಷನ್ ಆಫ್ ಪವರ್ ಎನ್ನುವ ರೀತಿಯಲ್ಲಿ ನಾನಾ ವಿಧವಾದ ಸೆಕ್ಷನ್‌ಗಳ ಕೆಳಗೆ ಅಧಿಕಾರವನ್ನು ಕೊಟ್ಟಿದ್ದಾರೆ. ತಹಸೀಲ್ದಾರ್ ಡೆಪ್ಯೂಟಿ ಕಮೀಷನರ್, ಮುಜರಾಯಿ ಕಮೀಷನರ್ ದರ್ಜೆಯವರಿಗೆ ಅಧಿಕಾರವನ್ನು ಕೊಡುವ ಒಂದು ಪ್ರಯತ್ನವನ್ನು ಮಾಡಿದ್ದಾರೆ. ಸಹಕಾರ ಸಂಘಗಳ ಬೆಳವಣಿಗೆಯಲ್ಲಿ ಸಾಕಷ್ಟು ಸ್ವಾತಂತ್ರ್ಯವನ್ನು ಕೊಟ್ಟು ಸಹಕಾರ ಸಂಸ್ಥೆಗಳಿಗೆ ಸಂಬಂದಪಟ್ಟ ವಿಷಯಗಳು ಹೇಗೆ ಪರ್ಯಾವಸಾನವಾಗಬೇಕು ಆ ವಿಚಾರಗಳು ಕೋರ್ಟಿಗೆ ಹೋಗಬಾರದು ಎನ್ನುವ ದೃಷ್ಟಿಯಿಂದ ಏನು ಕಾನೂನು ಮಾಡಿದ್ದಾರೆಯೋ, ಅದೇ ರೀತಿಯಲ್ಲಿ ದೇವಸ್ಥಾನಗಳ ಮ್ಯಾನೇಜ್‌ಮೆಂಟ್ ವಿಷಯದಲ್ಲಿಯೂ ಮಾಡಿದ್ದಾರೆ. ಸರ್ಕಾರ ಎನ್ನತಕ್ಕದ್ದು ಎಲ್ಲ ವಿಚಾರಣೆ ಕೂಡ ನಾವೇ ಮಾಡಿಬಿಡುತ್ತೇವೆ. ತೊಡಕು ತೊಂದರೆಗಳಿದ್ದರೆ ಕೋರ್ಟಿಗೆ ಹೋಗಬಾರದು, ಸರ್ಕಾರದವರೇ ಸರಿ ಮಾಡುವುದಕ್ಕೆ ಸಿದ್ಧ ಎನ್ನುವ ಹೊಸ ನಿರೂಪಣೆ ಈ ಮಸೂದೆಯಲ್ಲಿ ಕಲ್ಪಿಸಿದ್ದಾರೆ. ನನಗನಿಸುವುದು ಒಂದು, ಸೆಕ್ಯಲರಿಸಂ ಎನ್ನುವುದರ ಗಮನ ಸೆಳೆಯುವಾಗ ನಾನಾ ವಿಧವಾದ ಧರ್ಮ ಸಂಸ್ಥೆಗಳು ನಮ್ಮ ದೇಶದಲ್ಲಿರುವಾಗ ಮತ್ತು ನಮ್ಮ ದೇಶದಲ್ಲಿ ಒಂದೇ ತರಹದ ಜಾತಿ ಪಂಗಡವಿಲ್ಲದೇ ಇರುವಾಗ ಸರಕಾರ ಇದನ್ನು ಯಶಸ್ವಿಯಾಗಿ ಮಾಡುವುದಕ್ಕೆ ಸಾಧ್ಯವೇ ಎನ್ನುವ ಒಂದುಶಂಕೆಯೂ ಇದರಲ್ಲಿ ಬರುತ್ತದೆ. ಯಾವಾಗ ಮೂಲಭೂತವಾದ ಹಕ್ಕಿಗೆ ಧಕ್ಕೆ ಬರುತ್ತದೋ ಅದರ ಹಕ್ಕನ್ನು ಕೋರ್ಟಿಗೆ ಹೋಗಿ ಸರಿಪಡಿಸಿಕೊಳ್ಳಬಹುದಾಗಿತ್ತು. ಅಂತಹ ಹಕ್ಕು ಈಗ ಇದರಲ್ಲಿ ಕತ್ತರಿಸಿ ಹೋಗುತ್ತದೆ. ರೂಢ ಮೂಲವಾಗಿ ಹಾಗೂ ಧರ್ಮದ ಆಧಾರದ ಮೇಲೆ ಈ ದೇವಾಲಯಗಳು ಇವೆ ಮತ್ತು ಇದುವರೆಗೆ ದೇವ ಸ್ಥಾನಗಳಿಗೆ ಬರುವ ಪರಮಾವ ಸರಕಾರ ಪಾನ್ಯ ಮಾಡಿರುವ ಆದಾಯದ ಮೇಲೆ ಹಾಗೂ ದಾನಿಗಳು ಕೊಡುವ ಆದಾಯ ಇವುಗಳನ್ನು ಅನುಸರಿಸಿಕೊಂಡು ಒಂದು ವ್ಯವಸ್ಥೆ ನಡೆದುಕೊಂಡು ಬರುತ್ತಿದೆ. ಇವು ಗಳನ್ನು ಈಗ ತೆಗೆಯತಕ್ಕ ಸಂದರ್ಭ ಬಂದಿದೆ. ಮತ್ತು ದೇವಾಲಯಗಳಿಗೆ ಸೇರಿರುವ ಭೂಮಿಯನ್ನು ಸರ್ಕಾರ ವಶಕ್ಕೆ ತೆಗೆದುಕೊಳ್ಳಬೇಕಾಗಿದೆ. ಏಕೆಂದರೆ ಉಳುವವನೇ ಭೂಮಿಯ ಒಡೆಯನಾಗಬೇಕು ಎನ್ನುವ ತತ್ವವನ್ನು ಸರ್ಕಾರ ಒಪ್ಪಿರುವುದರಿಂದ ದೇವಾಲಯಕ್ಕೆ ಸೇರಿರುವ ಭೂಮಿಯನ್ನು ಇಲ್ಲಿ ಉಳು ವವರಿಗೇ ಕೊಡಬೇಕಾಗಿದೆ ಮತ್ತು ಇದಕ್ಕಾಗಿ ಒಂದು ರೀತಿಯಾಗಿ ಮಹತ್ ಪ್ರಯತ್ನವೂ ಆಗುತ್ತಿದೆ. ಇದರಲ್ಲಿರುವ ಚಿತ್ರ ನೋಡಿದರೆ ದೇವಾಲಯಗಳಿಗೆ ಯಾವ ವರಮಾನ ಇತ್ತೋ ಅವನ್ನೆಲ್ಲಾ ಸರ್ಕಾರ ತೆಗೆದುಕೊಂಡು ಈಗ ಇಲ್ಲಿನ ಅರ್ಚಕರುಗಳಿಗೆ ತಸ್ತೀಕ್ ಅಲೋಯನ್ಸ್ ಎಂದು ಕೊಡುತ್ತೇವೆಂದು ಇದರಲ್ಲಿ ಆಶ್ವಾಸನೆ ಕೊಟ್ಟಿದ್ದಾರೆ ಈ ಆಶ್ವಾಸನೆಯಲ್ಲಿ ಒಂದು ರೀತಿಯಾದ ಅಪಾಯ ಇದೆ. ಇಂದು ದೇವಾಲಯ ಗಳ ಪೂರ್ತಿ ಆಳವು ಅಥವಾ ಉಳಿವು ಸರ್ಕಾರದ ಕೈಯಲ್ಲೇ ಬರುತ್ತದೆ. ಇದುವರೆಗೂ ಇಂತಹ ಧಾರ್ಮಿಕ ಸಂಸ್ಥೆಗಳು ಸಾರ್ವಜನಿಕರ ಕೈಯಲ್ಲಿ ಹಾಗೂ ಈ ಸಂಸ್ಥೆಗಳ ಧರ್ಮದರ್ಶಿಗಳ ಕೈಯಲ್ಲಿ ಇರತಕ್ಕದ್ದನ್ನು ಇಂದು ಇದರ ಮೂಲಕ ಕಿತ್ತುಕೊಂಡು ಸರಕಾರ ತಸ್ತಿಕ್ ಅಲೋಯನ್ಸ್‌ಗಳೆಂದು ಮಾಡಿ ಇದನ್ನು ದೇವಾ ಲಯದಲ್ಲಿ ಕೆಲಸ ಮಾಡುವವರಿಗೆ ಕೊಡಬೇಕೆಂದು ಮಾಡುತ್ತಿದ್ದಾರೆ ಇಂತಹ ಧಾರ್ಮಿಕ ಸಂಸ್ಥೆಗಳಿಗೆ

ದುಡ್ಡು ಕೊಡಬೇಕೆನ್ನುವ ಸರ್ಕಾರದ ಧೋರಣೆ ಸರಿಯಾದುದಲ್ಲ. ಇದುವರೆಗೂ ಅನೂಚಾನವಾಗಿ ದೇವಾಲಯಗಳಲ್ಲಿ ಪೂಜೆ ಮಾಡಿಕೊಂಡು ದೀಪ ಹಚ್ಚಿಕೊಂಡು ಜನರಿಗೆ ದೇವರ ಪೂಜೆ ಮಾಡಲು ಒಂದು ರೀತಿಯಾದ ವ್ಯವಸ್ಥೆ ನಡೆದುಕೊಂಡು ಬರುತ್ತಿತ್ತು. ಇಂತಹ ವ್ಯವಸ್ಥೆಯನ್ನು ಇದರಲ್ಲಿ ಮೊಟಕು ಮಾಡಲು ಹೋದರೆ ಮುಂದೆ ಇಲ್ಲಿನ ಪೂಜೆ ಇತ್ಯಾದಿಗಳಿಗೇ ತೊಂದರೆಗಳು ಬರಬಹುದು ಮತ್ತು ಮುಂದೆ ಇವು ಉಳಿಯುವುವೋ ಅದನ್ನು ಹೇಳಲು ಬರುವುದಿಲ್ಲ. ಇದುವರೆಗೆ ಇದ್ದ ಸವಲತ್ತುಗಳನ್ನೆಲ್ಲಾ ತಪ್ಪಿಸಿ ತಪ್ಸಿಕ್ ಅಲೋಯನ್ಸ್‌ಗಳೆಂದು ಕೊಡುವಾಗ ಲ್ಯಾಂಡ್‌ರೆವಿನ್ಯೂ ರೆಂಟು ಇತ್ಯಾದಿಗಳನ್ನು ಯಾವ ಆಧಾರದ ಮೇಲೆ ಕೊಡುತ್ತಾರೋ ಅದರಂತಾಗುತ್ತದೆ ಎಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಮೂಲಭೂತವಾಗಿ ನಾವು ಎಷ್ಟೋ ಕಡೆಗಳಲ್ಲಿ ನೋಡುತ್ತಿದ್ದೇವೆ. ಭೂಮಿಯಂನ್ನು ಉತ್ತು ಕಷ್ಟಪಟ್ಟು ಅದನ್ನು ಉತ್ತಮವಾಗಿ ಮಾಡಿಕೊಂಡು ಇದುವರೆಗೆ ಅನುಭವಿಸಿಕೊಂಡು ಬರುತ್ತಿದ್ದುದನ್ನು ಈಗ ಇದನ್ನು ತಂದು ಕಂದಾಯಕ್ಕೆ ಗಂಟು ಹಾಕುವುದು ಎಂದರೆ ಸರಿಯಾಗುವುದಿಲ್ಲ. ಇವರ ಪ್ರಯತ್ನದಿಂದ ದೇವಾಲಯಗಳು ಹಾಗೂ ಧರ್ಮ ಸಂಸ್ಥೆಗಳು ಪ್ರತ್ಯೇಕವಾಗಿ ಹಾಗೂ ವ್ಯವಹಾರಿಕವಾಗಿ ಏನು ಅನುಸರಿಸಿಕೊಂಡು ಇದುವರೆಗೂ ಬರುತ್ತಿದ್ದವೋ ಅದು ಸುತರಾಂ ಇನ್ನು ಮುಂದೆ ಇರಲಾರದು ಎನ್ನುವ ಶಂಕೆ ಕೂಡ ಇವರಲ್ಲಿ ಬರುತ್ತದೆ ಸೆಕ್ಯುಲರಿಸಂನಲ್ಲಿ ದೇವರೇ ಇಲ್ಲ ಎನ್ನುವ ತತ್ವವನ್ನು ಅನುಸರಿಸುತ್ತಿರುವ ನಾವು ಜನರನ್ನು ಅವರ ಧರ್ಮ ಅನುಸರಿಸಲು ಅಡ್ಡಿ ಮಾಡುವಂತೆ ಇರಬಾರದು. The Government should not have people who have got religion of their own in the sence of its monopoly.

ಅಶೋಕ ಚಕ್ರವರ್ತಿ ಕಾಲದಲ್ಲಿ ಬೌದ್ಧಮತವನ್ನು ಆವಲಂಬನೆ ಮಾಡತಕ್ಕ ಕಾರ್ಯದಲ್ಲಿ ಮೊಗಲರು ಇಲ್ಲದ ಕಿರುಕುಳಗಳನ್ನು ಜನರಿಗೆ ಕೊಟ್ಟರು ಎಂದು ಇತಿಹಾಸಗಳಲ್ಲಿ ಓದಿದ್ದೇನೆ. ಇದು ಇತಿಹಾಸಕ್ಕೆ ಸಂಬಂಧಪಟ್ಟ ವಿಚಾರ, ಸರಕಾರದ ಕೈಯಲ್ಲಿ ಸರ್ವಧರ್ಮ ಸಮನ್ವಯ ದೃಷ್ಟಿಯಿಂದ, ಮತಗಳ ದೃಷ್ಟಿಯಿಂದ ಜನರ ಜತೆ ವ್ಯವಹರಿಸುವಾಗ ಸಂಪೂರ್ಣವಾದ ಸಹನೆ ಇರಬೇಕೇ ವಿನಾ ಇಂತಹ ಗೊಂದಲ ಮಯವಾದ ಅಥವಾ ಹಿಂಸಾತ್ಮಕತೆಗಳಿಗೆ ಎಡೆಯಾಗುವಂತಹ ಕೆಲಸಗಳನ್ನು ಮಾಡಬಾರದು. ಸೆಕ್ಯುಲರಿಸಂ ತತ್ವ ನಮ್ಮಲ್ಲಿರುವುದು. ಇಲ್ಲಿರುವ ಸಮಸ್ಯೆ ತಪ್ಸಿಕ್ ಅಲೋಯನ್ಸ್ ಕೊಟ್ಟು ಇಂತಹ ಸಂಸ್ಥೆಗಳನ್ನು ನಡೆಸುವುದು ಸಾಧುವೇ ಎನ್ನುವುದು. ಇಂತಹ ತಪ್ಸಿಕ್ ಅಲೋಯನ್‌ಗಳೆಂದು ಕೊಟ್ಟರೆ ಧಾರ್ಮಿಕ ಸಂಸ್ಥೆಗಳ ಕೆಲಸಕಾರ್ಯಗಳಿಗೆ ಕುಂಠಿತವಾಗುವುದಿಲ್ಲವೇ ಇದನ್ನು ವಿಚಾರ ಮಾತಬೇಕಾಗುತ್ತದೆ. ಇದರಲ್ಲಿ ಕುಂಠಿತವಾಗದಂತಹ ರೀತಿಯಲ್ಲಿ ಇದರ ವ್ಯವಸ್ಥೆಗಳನ್ನು ಮಾಡಬೇಕು ಎಂದು ಇಲ್ಲಿ ಹೇಳಲಿಚ್ಛಿಸುತ್ತೇನೆ. ಇದರ ಜೊತೆಗೆ ದೇವಾಲಯಗಳು ಈಗಿರುವ ರೀತಿಯಲ್ಲಿ ವಾಸ್ತವವಾಗಿ ಮುಂದುವರಿಯಲು ಅನುಕೂಲವಾಗುವುದೇ ಎನ್ನುವುದೂ ಇದೆ. ಹಿಂದೆ ಗಾಂಧಿಜಿಯವರೂ ಕೂಡ ಹರಿಜನರು ಒಂದು ರೀತಿಯಲ್ಲಿ ಧರ್ಮಕ್ಕೆ ವಿರೋಧವಾದವರು ಎಂದು ಹೇಳುವುದು ಸರಿಯಲ್ಲ Untouchability is a flaw on the globe of Hinduism. It should be removed. If it is not removed it will ruin the hinduism.

ಆಗ ಹಿಂದೂಯಿಸಂ ಹಾಗೂ ಮಹಮ್ಮಡಾಯಿಸಂ ಎಂದು ಒಂದು ರೀತಿಯಾದ ಗೊಂದಲಮಯವಾದ ಪರಿಸ್ಥಿತಿ ಇತ್ತು. ಪುರಾತನ ಕಾಲದಿಂದಲೂ ಅನೂಚಾನವಾಗಿ ದೇವಾಲಯಗಳನ್ನು ಕಟ್ಟಿಸಿ ದೇಶಕ್ಕೆ ಉದ್ದಾರ ಮಾಡಬೇಕೆಂಬ ಒಂದು ಪದ್ಧತಿ ನಡೆದುಕೊಂಡು ಬರುತ್ತಿತ್ತು. ಹಿಂದೆ ಹರಿಜನರಿಗೆ ದೇವಸ್ಥಾನಕ್ಕೆ ಹೋಗಲು ಕೂಡ ಅವಕಾಶ ಇರಲಿಲ್ಲ. ಆ ನಂತರ ಟೆಂಪಲ್ ಎಂಟ್ರಿ ಕಾನೂನು ಬಂದು ಎಲ್ಲರಿಗೂ ದೇವಾಲಯಕ್ಕೆ ಹೋಗಲು ಅವಕಾಶವಾಯಿತು. ಈಗ ಇಲ್ಲಿ ಇಂತಹ ಒಂದು ಕಾನೂನು ತಂದು ಸರ್ಕಾರವೇ ಎಲ್ಲ ಆಡಳಿತವನ್ನೂ ವಹಿಸಿಕೊಂಡು ನಡೆಸಬೇಕೆಂದರೆ ಇದರಲ್ಲಿ ಜನಕ್ಕೆ ಸರಿಯಾದ ಅನುಕೂಲಗಳು ಸಿಗಲಾರದು ಎನ್ನುವ ಒಂದು ಶಂಕೆ ಬರಬಹುದು ಇದರಲ್ಲಿ ಒಂದು ನವೀನ ತತ್ವ ಅಡಗಿರುವುದರಿಂದ ಇದನ್ನು ಈಗ ವಿಚಾರ ಮಾಡುವ ಅವಶ್ಯಕತೆ ಇದೆ. ಸರಕಾರವೇ ಇದನ್ನು ಇಟ್ಟುಕೊಂಡರೆ ಧಾರ್ಮಿಕ ಸಂಸ್ಥೆಗಳು ಸರಿಯಾಗಿ ನಡೆಯುವುದರಲ್ಲಿ ಕುಂಠಿತವಾಗಬಹುದು. ಈಗಾಗಲೇ ಸರ್ಕಾರದ ವಶದಲ್ಲಿರುವ ಸಂಸ್ಥೆಗಳು ಯಾವ ರೀತಿ ನಡೆಯುತ್ತಿವೆ ಎನ್ನುವುದನ್ನು ನೋಡಿದರೆ ಅದರಿಂದ ನಮಗೆ ಇದು ಅರ್ಥವಾಗುತ್ತದೆ. ಇದರಿಂದ ಒಂದು ರೀತಿಯಾದ ಅಪಾಯವೂ ಬರಬಹುದು, ಹಿಂದಿನಿಂದಲೂ ಒಂದು ರೀತಿಯಾದ ಧಾರ್ಮಿಕ ತತ್ವ ಬೆಳೆದುಕೆದುಂಡು ಬರುತ್ತಿದೆ, ಪೂಜಾರಿಗಳೇ ಸರಿಯಾದ ರೀತಿಯಲ್ಲಿ ತರಬೇತಿ ಹೊಂದಿರುವವರು men of high culture and training ಇದರಲ್ಲಿರುತ್ತಾರೆ. ಇದನ್ನು ಬೆಳೆಸಿ ದೇವಾಲಯಗಳನ್ನು ಚೆನ್ನಾಗಿ ಇಟ್ಟು, ಇದರ ಕಾರ್ಯಕಲಾಪಗಳನ್ನು ಸರಿಯಾಗಿ ನಡೆಯುವಂತೆ ಮಾಡಬೇಕು. ಗೊಂದಲಮಯವಾದ ಪರಿಸ್ಥಿತಿಯನ್ನು ಇದರಲ್ಲಿ ತಂದರೆ ಇಂತಹ ಸಂಸ್ಥೆಗಳಿಂದ ಜನತೆಗೆ

(ಶ್ರೀ ಕೆ ಪ್ರಭಾಕರ್)

ಪ್ರಯೋಜನವಾಗುವುದಿಲ್ಲ. ಎಷ್ಟೋ ಕಡೆಗಳಲ್ಲಿ ನಮಗೆಲ್ಲ ತಿಳಿದಿರುವ ಹಾಗೆ ದೇವರ ವಿಗ್ರಹಗಳನ್ನು ಕದ್ದುಕೊಂಡು ಹೋಗಿ ಆ ವಿಗ್ರಹಗಳನ್ನು ಕರಗಿಸಿ ದುರ್ವ್ಯವಹಾರಗಳಿಗೆ ಅವಕಾಶ ಮಾಡಿದ್ದಾರೆ. ಹೀಗೆ ದೇವಾಲಯಗಳಲ್ಲಿರುವ ವಿಗ್ರಹಗಳನ್ನೇ ಕದಿಯುವುದಾದರೆ ಇದರಿಂದ ಜನರ ಮನೋಭಾವ ಯಾವ ರೀತಿಯಾಗುತ್ತದೆ ಎನ್ನುವುದನ್ನು ನಾವೆಲ್ಲರೂ ಯೋಚನೆ ಮಾಡಬೇಕು. ಹೀಗಿರುವಾಗ ಇದರಲ್ಲಿ ತಪ್ಪಿಸ್ಕೊ ಆಲೋಯನ್ಸ್ ಎಂದು ಸರ್ಕಾರ ಕೊಡುವುದರಿಂದ ಇದನ್ನು ಧಾರ್ಮಿಕಯುಕ್ತವಾಗಿ ಮಾಡುವುದು ಕಷ್ಟ, ಮತ್ತು ಇದನ್ನು ನವೀನ ರೀತಿಯಲ್ಲಿ ಮಾಡುವುದೂ ಕಷ್ಟ. These institutions should be based on scientific reasoning.

ಇದರಲ್ಲಿ ಮಾರಲ್ ರೀತಿ ಇರಬೇಕೆಂದು ಹೇಳುವುದು ಮುಂದೆ ನಾನು ಮಾರಲ್ ಎನ್ನುವಂತಾಗಿ ಗೊಂದಲಗಳಾಗಬಹುದು ಎನ್ನುವುದನ್ನು ಅರಿತುಕೊಳ್ಳಬಹುದು. ಹಿಂದಿನಿಂದ ಬಂದಿರುವ ಇಂತಹ ಧಾರ್ಮಿಕ ಸಂಸ್ಥೆಗಳನ್ನು ಬೆಳೆಸಬೇಕು ಮತ್ತು ಅದನ್ನು ಉಳಿಸಬೇಕು ಎನ್ನುವ ಎದೆಗಾರಿಕೆ ಸರಕಾರಕ್ಕೆ ಇರಬೇಕು ಮತ್ತು ಆ ರೀತಿ ಚೆನ್ನಾಗಿ ಉಳಿಸಿ ಬೆಳೆಸಬೇಕು. ಇದರಲ್ಲಿ ಏನು ಮಲಿನತೆ ಇದೆ ಅದನ್ನು ಮನಗಂಡು ಅದನ್ನು ತೊಡೆದು ಹಾಕಿ ನಿಷ್ಕಳಂಕವಾದ ಹಾಗೂ ಸಾಮಾಜಿಕವಾದ ಶಕ್ತಿಯನ್ನು ಬೆಳೆಸಿ ಸರಿಯಾದ ರೀತಿಯಲ್ಲಿ ಇವುಗಳು ರುವಂತೆ ವ್ಯವಸ್ಥೆ ಮಾಡಬೇಕು. ಧರ್ಮದಲ್ಲಿ ಸಹನೆ ಇರತಕ್ಕ ಜನ ದೇಶದಲ್ಲಿರುವ ಸಂಸ್ಕೃತಿ ಹಾಗೂ ಧರ್ಮ ಸಹಿಷ್ಣುತೆ ಎನ್ನುವ ರಸಾಯನವನ್ನು ಬೆಳೆಸಿಕೊಂಡು ಬರುತ್ತಿದ್ದಾರೆ. ಇದರಿಂದ ಜನರು ಘುಸೀದಿ ಹಾಗೂ ದೇವಾಲಯಗಳಲ್ಲಿ ಭಜನೆ ಇತ್ಯಾದಿ ಕೆಲಸಗಳನ್ನು ಇದು ವರೆಗೂ ನಡೆಸಿಕೊಂಡು ಬರುತ್ತಿದ್ದಾರೆ. ಇಂದು ದೇಶದಲ್ಲಿ ಡೆಮಾಕ್ರೆಟಿಕ್ ಸೋಷಿಯಲಿಸಂ ಎನ್ನುವುದನ್ನು ತರಬೇಕೆಂದಿರುವಾಗ ಇಂತಹ ಸಂಸ್ಥೆಗಳನ್ನು ಬೆಳೆಸುವಾಗ ಸರಕಾರಕ್ಕೆ ಇದರಲ್ಲಿ ಒಂದು ಮಹತ್ತರವಾದ ಜವಾಬುದಾರಿ ಇರುತ್ತದೆ ಇದನ್ನು ಸರ್ಕಾರ ವಿಚಾರ ಮಾಡಬೇಕು. Whatever is not appealing to sound reason and common sense it is simply irrational.

MR DEPUTY SPEAKER. — The Hon'ble Member may continue his speech tomorrow.

ಶ್ರೀ ಎಸ್ ಬಂಗಾರಪ್ಪ —ಮಾನ್ಯ ಮುಖ್ಯಮಂತ್ರಿಗಳು ದೆಹಲಿಯಿಂದ ಬರಗಾಲ ಹಾಗೂ ಇನ್ನಿತರ ವಿಚಾರಗಳನ್ನು ಚರ್ಚೆ ಮಾಡಿಕೊಂಡು ಇಲ್ಲಿಗೆ ಬಂದಿದ್ದಾರೆ ನಾವು ಹಾಗೂ ನಮ್ಮ ಈ ಸದನದ ಸದಸ್ಯರೆಲ್ಲರೂ ಅವರು ಸರಕಾರದ ಪರವಾಗಿ ಬರಗಾಲದ ಬಗ್ಗೆ, ಏನು ನಿರ್ಣಯ ತೆಗೆದುಕೊಂಡು ಬಂದರು ಅದನ್ನು ಕೇಳಲು ಕುತೂಹಲರಾಗಿದ್ದಾರೆ. ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳನ್ನು ಇಲ್ಲಿಗೆ ಕರೆಸಿ ಅವರಿಂದ ಸಭೆಗೆ ಒಂದು ಹೇಳಿಕೆ ಕೊಡಲು ತಾವು ಸಹಾಯ ಮಾಡಿಕೊಡಬೇಕೆಂದು ನಮ್ಮನ್ನು ಕೇಳುತ್ತೇನೆ. ಏಕೆಂದರೆ ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಯಲ್ಲಿ ಒಂದು ರೀತಿ ಹೇಳಿಕೆ ಕೊಟ್ಟಿದ್ದಾರೆ ಇಲ್ಲಿ ಒಂದು ರೀತಿ ಹಿಂದೆ ಹೇಳಿಕೆ ಕೊಟ್ಟಿದ್ದಾರೆ. ಇದರಿಂದ ನಮಗೆ ಬಂದಿರುವ ಶಂಕೆ ಪರಿಹಾರವಾಗಲು ಅವರಿಂದ ಹೇಳಿಕೆ ಕೊಡಿಸಬೇಕಾಗಿ ಕೇಳುತ್ತೇನೆ.

MR DEPUTY SPEAKER.—We are here tomorrow also. The Hon'ble Member is not so young as he was previously. He must have some restraint and sense of proportion. He can raise it subsequently.

The House will now rise to meet again tomorrow at 1 p.m.

The House adjourned at Six of the Clock to meet again at One of the Clock on Tuesday, the 27th February 1973.